ಮೈಸೂರ ಗೆಜೆಟ್ಟ.

ನಂ. 43 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1887.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 29, ಸನ್ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವ್ಯಾರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬುಕ್‌ಪೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟ್ ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗ್ಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 12ನೇ ಅಕ್ಟೋಬರ್ 1887ನೇ ಇಸವಿ.

ಕ್ಯಾಂಪ್ ನಂ. 1486.—ಇದರಿೀ ಕಂಡ ಉಮೇದ್ವಾರರು ಅವರ್ಕಹೆಸರಿಗೆ ಬಾಜೂದಲ್ಲಿ ಕಂಡ ತಾರೀಖು ಲಾಗಾಯತು ಆರು ತಿಂಗಳು ಪರಿಯಂತ ಅಜಮಾಯಿಷೀ ತರೀಕ್ ಆಸ್ಪಿಟಲ್ ಅಸಿಸ್ಟೆಂಟರಾಗಿ ಪ್ಲೊಕರರ್ಮ್ಯಾಡಲ್ಪಟ್ಟಿರುತ್ತಾರೆ:—

1. ಜ್ಞಾನಪ್ರಕಾಶಂಪಿಳ್ಳೆ, 2ನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟ್, 1887ನೇ ಇಸವಿ ಅಕ್ಟೋಬರ್ 3ನೇ ಮುಕ್ತಂ ಲಾಗಾಯತು.
2. ಪಿ. ವೆಂಕಟರಂಗಂನಾಯಿಡು, 3ನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟ್, 1887ನೇ ಇಸವಿ ಅಕ್ಟೋಬರ್ 6ನೇ ಮುಕ್ತಮಿನ ಲಾಗಾಯತು.

ಮೊಕ್ಕಾಂ ಮೈಸೂರು, ತಾರೀಖು 12ನೇ ಸೆಪ್ಟಂಬರ್ 1887ನೇ ಇಸವಿ.

ನಂ. 113.—1887ನೇ ಇಸವಿ ಸೆಪ್ಟಂಬರ್ 5ನೇ ಮಕ್ಕಂ 107ನೇ ನಂಬರ್ ಇಸ್ತಿಹಾರ್‌ನಾಮೆಯ 5ನೇ ಕಲಂ ಪ್ರಕಾರ ಗನೀ ಕೆಲಸ ನಡಿಸುವ ಬಗ್ಯೆ ಲೈಸೆನ್ಸ್ ಕೊಡಲ್ಪಡಬೇಕಾದ ಜಮೀನಿನ ವಿಸ್ತೀರ್ಣದ ವಿಷಯದಲ್ಲಿ ಚಾಲತೀ ವರುಷಕ್ಕೆ 35 ಚದರ್ ಮೈಲಿಗಳ ಮಟ್ಟಿಗೆ ಕೊಡಲ್ಪಡತಕ್ಕದ್ದೆಂದು ಶ್ರೀಮನ್ ಮಹಾರಾಜಾ ಸರ್ಕಾರದವರು ಗೊತ್ತು ಮಾಡಿರುವದರಿಂದಲೂ ಮತ್ತು ಇದಕ್ಕೆ ಕೇರಿಸೋಣಾದ A ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಪ್ರತಿ ತಾಕಿನ ವಿಷಯದಲ್ಲೂ ಗನೀ ಕೆಲಸ ನಡಿಸುವ ಲೈಸೆನ್ಸಿಗೋಸ್ಕರ ವಂದಕ್ಕಿಂತಲೂ ಜಾಸ್ತಿಯಾಗಿ ದರಖಾಸ್ತುಗಳು ಬಂದಿರುವದರಿಂದಲೂ ಮತ್ತು ಸರ್ಕಾರದವರು, ಮೇಲ್ಕಂಡ ಪ್ರತಿ ತಾಕಿಗೂ ಬಹಿರಂಗವಾದ ಚಡ ದರಖಾಸ್ತು ಮೂಲಕ ಹುಟ್ಟಬಹುದಾದಂಥಾ ಪ್ರೀಮಿಯಂಯಾನೇ ನಫೆಗೆ ಗನೀ ಕೆಲಸದ ಲೈಸೆನ್ಸ್ ಕೊಡಲ್ಪಡತಕ್ಕದ್ದೆಂದು ನಿಷ್ಕರ್ಷೇ ಮಾಡಿರುವದರಿಂದ ಮೇಲ್ಕಂಡ ಲೈಸೆನ್ಸುಗಳಿಗೋಸ್ಕರ, ಇದರಡೀಕಂಡ ಷರತ್ತುಗಳಿಗೆ ಒಳಪಟ್ಟು ಯಿದರ ದೆಸೆಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತವೆ:—

I. ಪ್ರತಿ ದರಖಾಸ್ತಿನಲ್ಲಿಯೂ ದರಖಾಸ್ತು ಮಾಡಲ್ಪಟ್ಟ ಗೊತ್ತಾದ ತಾಕು ನಮೂದಿಸಲ್ಪಡತಕ್ಕದ್ದಲ್ಲದೆ ಸದರೀ ತಾಕಿನ ಲೈಸೆನ್ಸಿಗೋಸ್ಕರ ದರಖಾಸ್ತುದಾರನು ಪಾವತೀ ಮಾಡುವದಕ್ಕೆ ಒಪ್ಪುವ ನಫೇ ಮೊಬಲಗು ಸುದಾ ಕಾಣಿಸಲ್ಪಡತಕ್ಕದ್ದು, ಲೈಸೆನ್ಸಿನ ಷರತ್ತುಗಳು ಇದಕ್ಕೆ ಕೇರಿಸೋಣಾದ B ನಮೂನೆಯಲ್ಲಿ ವಿವರಿಸಲ್ಪಟ್ಟಂತೆ ಯಿರುತವೆ. ನಫೇ ಮೊಬಲಗು ಪೌಂಡ್ ಸಂಖೆಯಲ್ಲಾಗಲೀ ರೂಪಾಯಿ ಸಂಖೆಯಲ್ಲಾಗಲೀ ತಿಳಿಸಲ್ಪಡತಕ್ಕದ್ದು.

II. ಪ್ರತಿ ದರಖಾಸ್ತಿನ ಸಂಗಡಲೂ, ಪಾವತೀ ಮಾಡುವದಕ್ಕೆ ಒಪ್ಪಿಕೊಳ್ಳಲಾದ ನಫೇ ಮೊಬಲಗಿನ ದಶಮಾಂಕಕ್ಕೆ ಸರಿಯಾದ ಮೊಬಲಗು ಶೇವಣೀ ತರೀಕ್ ಕಳುಹಿಸಲ್ಪಡತಕ್ಕದ್ದಲ್ಲದೆ ಶೇವಣೀ ಮೊಬಲಗು ಮೈಸೂರು ದೇಶದ ದಿರ್ವಾರವರ ಹೆಸರಿಗೆ ಜಮೇ ಹಿಡಿಯತಕ್ಕ ಬಗ್ಯೆ ಮೈಸೂರು ದೇಶದ ಯಾವದಾದರೂ ಸರ್ಕಾರ್ ಖಜಾನೆಯಲ್ಲಾಗಲಿ ಯಿಂಡಿಯಾ ದೇಶದಲ್ಲಿನ ಯಾವದಾದರೂ ರಾಜಧಾನೀ ಬ್ಯಾಂಕಿನಲ್ಲಿಯಾಗಲಿ ಅಥವಾ ಲಂಡ್ಕನಲ್ಲಿ 59ನೇ ಸ್ಟ್ರಾಂಡ್ ಸ್ಥಳದಲ್ಲಿರುವ ಮೆಸ್ಸಿಯರಸ್ ಕೌಟ್ಸ್ ಅಂಡ್‌ಕೋಯವರಿಗಾಗಲಿ ಪಾವತೀ ಮಾಡಲ್ಪಟ್ಟು ಅಂಥಾ ಪಾವತೀ ಬಗ್ಯಾಗಿ ಪಡೆದ ರೀತಿಯು ದರಖಾಸ್ತಿನೊಂದಿಗೆ ಕಳುಹಿಸಲ್ಪಡತಕ್ಕದ್ದು.

III. ದರಖಾಸ್ತು, ಈ ಇಸ್ತಿಹಾರ್‌ನಾಮೆಗೆ ಲಗತ್ತಿರುವ C ನಮೂನೇಯಲ್ಲಿ ಬರೆಯಲ್ಪಡತಕ್ಕದ್ದು.

IV. ಮೇಲ್ಕಂಡ IIನೇ ಪ್ಯಾರಾ ಅನುಸರಿಸಿ ಪಾವತೀ ಮಾಡಲ್ಪಟ್ಟ ಶೇವಣೀಗೋಸ್ಕರ ಪಡೆದ ರೀತೀ ಸಹಿತವಾಗಿ ದರಖಾಸ್ತು ಒಂದು ಲಿಫಾಫೆಯಲ್ಲಿ ಹಾಕಿ ಮೊಹರ್ ಮಾಡಲ್ಪಟ್ಟು "ಗನೀ ಕೆಲಸದ ಗುತ್ತಿಗೇ ಬಗ್ಯೆ ದರಖಾಸ್ತು" ಯಂಬದಾಗಿ ಮೇಲೆ ಬರೆಯಲ್ಪಟ್ಟು ಬೆಂಗಳೂರಲ್ಲಿ ಮೈಸೂರು ದೇಶದ ದಿರ್ವಾರವರ ಹೆಸರಿಗೆ ಮೇಲ್ ವಿಳಾಸ ಬರೆಯಲ್ಪಡತಕ್ಕದ್ದು.

V. ದರಖಾಸ್ತುಗಳು, ದಿರ್ವಾರವರಿಗೆ 1887ನೇ ಇಸವಿ ಡಿಸಂಬರ್ 10ನೇ ಮಕ್ಕಮಿನ ಮಧ್ಯಾನ್ಹದಲ್ಲಿಯಾಗಲೀ ತತ್ಪೂರ್ವದಲ್ಲಿಯಾಗಲಿ ತಲಪಬೇಕಾಗಿರುತ್ತೆ. ಆಗ ಅವು ದಿರ್ವಾರವರಿಂದ ಬೆಂಗಳೂರಲ್ಲಿರತಕ್ಕ ಪಬ್ಲಿಕ್ ಆಫೀಸ್ ಯಂಬ ಕಟ್ಟಡೊಳಗೆ, ಹಾಜರಿರಬಹುದಾದ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು.

VI. ದರಖಾಸ್ತುಗಳ ಆಖೈರ್ ವ್ಯವಸ್ಥೆಯು ದಿರ್ವಾರವರಿಗೆ ಕೇರಿಯತ್ತೆ. ಅವರು ಯಾವ ಕಾರಣವೂ ತಿಳಿಸದೇನೇ ಚಡ ದರಖಾಸ್ತನ್ನಾಗಲೀ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

VII. ಯಾವ ದರಖಾಸ್ತು ದಿರ್ವಾರವರಿಂದ ಅಂಗೀಕರಿಸಲ್ಪಡುತಿದೆಯೋ ಅಂಥಾ ದರಖಾಸ್ತುದಾರನು, ಅಂಥಾ ಅಂಗೀಕಾರ ತನಿಗೆ ತಿಳಿಸಲ್ಪಟ್ಟ 30 ದಿವಸಗಳೊಳಗಾಗಿ ದರಖಾಸ್ತಿನಲ್ಲಿ ಪಾವತೀ ಮಾಡುವದಾಗಿ ಒಪ್ಪಿಕೊಂಡಿರುವ ನಫೇ ಮೊಬಲಗಿನ ಉಳಿದ ಭಾಗವನ್ನು ದಿರ್ವಾರವರ ಹೆಸರಿಗೆ ಜಮೇಕಟ್ಟುವ ಬಗ್ಯೆ ಮೈಸೂರು ದೇಶದ ಯಾವದಾದರೂ ಸರಕಾರದ ಖಜಾನೆಯಲ್ಲಾಗಲಿ, ಯಿಂಡಿಯ ದೇಶದಲ್ಲಿನ ಯಾವದಾದರೂ ರಾಜಧಾನೀ ಬ್ಯಾಂಕಿನಲ್ಲಾಗಲೀ ಅಥವಾ ಲಂಡ್ಕ ಪಟ್ಟಣದ ಮೆಸ್ಸಿಯರ್ಸ್ ಕೌಟ್ಸ್ ಅಂಡ್‌ಕೋ ಯವರಿಗಾಗಲಿ ಪಾವತೀ ಮಾಡತಕ್ಕದ್ದು.

VIII. ಮಂಜೂರ್ ಮಾಡಲ್ಪಟ್ಟ ದರಖಾಸ್ತುದಾರರ ಜೆಸರು ದೇಖೀಲ್ ಆಗುವ ದರಖಾಸ್ತುಗಳು ಯಾವದಕ್ಕೆ ಅಂಗೀಕರಿಸಲ್ಪಟ್ಟಿರು ತದೆಯೋ ಅಂಥಾ ತಾಕುಗಳ ವಿವರಣೆಯು ಸರ್ಕಾರೀ ಗೆಜೆಟ್ಟಿನಲ್ಲಿ ಪ್ರಕಟಿಸ ಮಾಡಲ್ಪಡುವದು.

IX. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಹಾಜರ್ಪಡಿಸಲ್ಪಟ್ಟ ಶೇವಣಿಯು, ಅವರು ಪ್ರಾಯಿಷ್ ಮಾಡಿದಾಗ ವಾಪಸ್ ಮಾಡಲ್ಪಡುವದು.

X. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು, ಗುತ್ತಿಗೇ ಕರಾರು ಹುಟ್ಟುವದಕ್ಕೆ ಮುಂಚೆ ಯಾವ ಕಾಲದಲ್ಲಿ ಆಗಲಿ ಇದಕ್ಕೆ ಲಗತ್ತಿರುವ A ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಸರಹದ್ದಿನೊಳಗಣ ತಾಕಿನಲ್ಲಿ ಮೊಕ್ತಾಂ ಮಾಡುವ ಬಗ್ಗೆ ಅವಕಾಶ ಕೊಡಲ್ಪಡುವನು, ಆದರೆ ಆತನು ಮೇಲೆಕಂಡ VIIನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟಿಂತೆ ನಫೇ ಬಾಬತು ಉಳಿದ ಬಾಕಿಯನ್ನು ಪಾವತೀ ಮಾಡಿದ ತರುವಾಯ ಆರು ತಿಂಗಳ ವಳಗಾಗಿ ಗವರ್ಣಮೆಂಟ್ ತರಫಿನಲ್ಲಿ ದಿರ್ವಾರವರಿಂದ ರುಜಾ ಮಾಡಲ್ಪಡುವ ಬಗ್ಗೆ ಇದಕ್ಕೆ ಜಂಟಿಸೋಣಾದ B. ನಮೂನೆಯಲ್ಲಿ ತಯಾರ್ಮಾಡಲ್ಪಟ್ಟು ಕ್ರಮವಾಗಿ ಸ್ಟ್ಯಾಂಪ್‌ಹಾಕಲ್ಪಟ್ಟ ಗುತ್ತಿಗೇ ಕರಾರನ್ನು ಹಾಜರ್ಮಾಡತಕ್ಕದ್ದು.

XI. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು VIIನೇ ಪ್ಯಾರಾದಲ್ಲಿ ನಿಯಮಿಸಲ್ಪಟ್ಟ ಪ್ರಕಾರ ನಫೆಯ ಬಾಕೀ ಮೊಬಲಗನ್ನು ಪಾವತೀ ಮಾಡುವದಕ್ಕಾಗಲೀ Xನೇ ಪ್ಯಾರಾದಲ್ಲಿ ವಿಧಿಸಲ್ಪಟಂತೆ ಗುತ್ತಿಗೇ ಕರಾರನ್ನು ದಸ್ತಖತ್ತಿಗೋಸ್ಕರ ಹಾಜರ್ಮಾಡುವದಕ್ಕಾಗಲಿ ತಪ್ಪಿದರೆ ದರಖಾಸ್ತುದಾರನಿಂದ ದಿರ್ವಾರವರ ಹೆಸರಿಗೆ ಜಮೇಕಟ್ಟುವ ಬಗ್ಗೆ ಹಾಂಗೆ ತಪ್ಪಿಹೋದ ತಾರೀಖಿನ ವರಿಗೆ ಪಾವತೀ ಮಾಡಲ್ಪಟ್ಟಿರುವ ಕೇವಣೀ ಯಾ ಇತರ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೇ ಅಂಥಾ ಮೊಬಲಗು ಯಾವ ಬಗ್ಗೆ ಪಾವತೀ ಮಾಡಲ್ಪಟ್ಟಿತೋ ಅಂಥಾ ಜಮೀನುಗಳು ಸರ್ಕಾರದವರ ಯಖ್ತ್ಯಾರೀಯಲ್ಲಿ ಸಂಪೂರ್ಣವಾಗಿ ಯಿರತಕ್ಕದ್ದು.

XII. A ಷೆಡ್ಯೂಲ್‌ನಲ್ಲಿ ನಮೂದ್ ಮಾಡಲ್ಪಟ್ಟ ತಾಕುಗಳು ಯಿರತಕ್ಕ ಪ್ರದೇಶವನ್ನು ತೋರಿಸುವ ಮೈಸೂರು ದೇಶದ ಬ್ರಿಟಿಷ್ ಟೊಪೋಗ್ರ್ಯಾಫಿಕಲ್ ಸರ್ವೆ ಇಲಾಖೇಯಿಂದ ತಯಾರ್ಮಾಡಲ್ಪಟ್ಟ ಮ್ಯಾಪ್‌ಯಾನೇ ನಕ್ಷೆಯು (ಅಂಗುಲ ವಂದಕ್ಕೆ ಪಂದುಮೈಲೀ ಫಾಸಲೆಯುಳ್ಳ) ನಕ್ಕಲು ಬೆಂಗಳೂರಲ್ಲಿರುವ ದಿರ್ವಾರವರ ಕಚೇರೀಯಲ್ಲಿ ಯಿರುವದು ಮತ್ತು ಅಂಡರ್ ಸೆಕ್ರಿಟೆರಿಯಾಸರನ್ನ ಬೇಡಿದಲ್ಲಿ ಯಾರಿಗಾದರೂ ಬಗರ್ ಚಾರ್ಜ್ ನೋಡುವ ಬಗ್ಗೆ ಅವಕಾಶ ಕೊಡಲ್ಪಡುವದು.

ಹುಕ್ಕುಂ ಬಜೋಜೇಬ್,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಿಟರಿ.